ವಿಶ್ವವಾಣಿ
ಸಂಪಾದಕೀಯ

ಏಡ್ಸ್ ಇಳಿಮುಖ ಸಮಾಧಾನ ಬೇಡ ಉದಾಸೀನ

ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗದರ್ಶನದ ಮೇರೆಗೆ ಡಿ.1ನ್ನು ಏಡ್ಸ್ ದಿನಾಚರಣೆಯನ್ನಾಗಿ ಆಚರಿಸಿದ್ದೇವೆ. 80ರ ದಶಕದಲ್ಲಿ ಉಲ್ಬಣಗೊಂಡ ಈ ಕಾಯಿಲೆ ಸೃಷ್ಟಿಸಿದ ಪ್ರಭಾವ ಮಾತ್ರ ಅಗಾಧವಾದದ್ದು. ಈ ಕಾಯಿಲೆ ಕಾಣಿಸಿಕೊಂಡು 7ವರ್ಷ ಕಳೆಯುವುದರೊಳಗಾಗಿ ತನಗೊಂದು ದಿನಾಚರಣೆಯನ್ನು ಸೃಷ್ಟಿಸಿಕೊಂಡಿತ್ತೆಂದರೆ, ಅದರ ಭಯಾನಕತೆಯನ್ನು ನಾವು ಊಹಿಸಿಕೊಳ್ಳಬಹುದು.

ಏಡ್ಸ್ ಕಾಯಿಲೆ ಗುಣವಾಗದ ಮಾರಣಾಂತಿಕ ಕಾಯಿಲೆ ಎಂಬ ಕುಖ್ಯಾತಿಗೆ ಕಾರಣವಾಗಿದ್ದು ಒಂದೆಡೆಯಾದರೆ, ಈ ರೋಗವನ್ನು ಹೊಂದಿರುವವರನ್ನು ಸಮಾಜವು ನೋಡುವ ರೀತಿಯೇ ಮತ್ತೊಂದು ರೀತಿಯಾಗಿತ್ತು. ಈ ಕಾಯಿಲೆಗೆ ಒಳಗಾದವರು ಕಾಯಿಲೆಯಿಂದ ಮುಕ್ತವಾಗುವುದಕ್ಕಿಂತಲೂ ಸಮಾಜವು ತನ್ನನ್ನು ನೋಡುತ್ತಿರುವ ವಿಚಿತ್ರವಾದ ನೋಟಕ್ಕೆ ಹೆದರುವಂತಹ ಪರಿಸ್ಥಿತಿಯೇ ಹೆಚ್ಚಾಗಿತ್ತು. ಇದು ಸಹ ಒಂದು ರೀತಿಯ ಅಸ್ಪೃಶ್ಯತೆಯ ರೀತಿಯಾಗಿತ್ತು.

ಏಡ್ಸ್ ಗುಣವಾಗದ ರೋಗವೇನೋ ಹೌದು. ಆದರೆ ಬಾಧಿತರನ್ನು ಕೀಳಾಗಿ ಕಾಣುವ ಅಗತ್ಯವಿಲ್ಲ. ಇತರೆ ಕಾಯಿಲೆಗಳಂತೆಯೇ ಇದು ಸಹ ಒಂದು ಎಂದು ಸಾರ್ವಜನಿಕರಿಗೆ ಮನವರಿಕೆ ಮಾಡುವಲ್ಲಿ ಸರಕಾರ, ಆರೋಗ್ಯ ಇಲಾಖೆಗಳು, ಸಂಘ-ಸಂಸ್ಥೆಗಳು ಶ್ರಮಿಸಿದ ರೀತಿಯಂತೂ ಅಚ್ಚರಿಪಡುವಂತಹದ್ದು.

ಹಿಂದಿನ ದಿನಗಳಿಗೆ ಹೋಲಿಸಿದರೆ ಇಂದು ಏಡ್ಸ್ ರೋಗಿಗಳ ಸಂಖ್ಯೆ ಕ್ಷೀಣಿಸಿದೆ. ಜನರಲ್ಲಿಯೂ ಬಹಳಷ್ಟು ಜಾಗೃತಿ ಮೂಡಿದೆ. ಬಹಳಷ್ಟು ಚಿಕಿತ್ಸಾ ಕ್ರಮಗಳನ್ನು ಸಹ ಕಂಡುಹಿಡಿಯಲಾಗಿದೆ. 2030ರೊಳಗೆ ಜಗತ್ತಿನಲ್ಲಿ ಏಡ್ಸ್ ರೋಗವನ್ನು ನಿರ್ಮೂಲನೆ ಮಾಡಬೇಕಾಗಿದೆ. ಇದಕ್ಕಾಗಿ ನಾವೆಲ್ಲರೂ ಈ ರೋಗದ ಬಗ್ಗೆ ತಿಳಿಯುವುದರ ಜತೆಗೆ ಜಾಗೃತಿಗೂ ಮುಂದಾಗಬೇಕಿದೆ.

ಮೊಟ್ಟ ಮೊದಲ ಏಡ್ಸ್ ಪ್ರಕರಣ ಜೂನ್ 5, 1981ರಂದು ವರದಿಯಾಯಿತು. ಯುಎಸ್‌ನ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಸಂಸ್ಥೆಯು ಲಾಸ್ ಎಂಜಲೀಸ್‌ನ ಐವರು ಸಲಿಂಗಕಾಮಿಗಳಲ್ಲಿ ಏಡ್ಸ್‌ಗೆ ಕಾರಣವಾದ ಅಣುವಿನ ಗುಂಪುಗಳಿರುವುದನ್ನು ಪತ್ತೆಹಚ್ಚಿತು. ಆರಂಭದಲ್ಲಿ ಇದಕ್ಕೆ ಯಾವ ಹೆಸರೂ ಇರಲಿಲ್ಲ. ಉದಾಹರಣೆ ಏಡ್ಸ್‌ಗೆ ಕಾರಣವಾದ ಎಚ್‌ಐವಿ ವೈರಸ್‌ನ್ನು ಲಿಂಫಡಿನೋಪತಿ ಎಂದು ಕರೆಯುತ್ತಿದ್ದರು. ನಂತರ 1982ರ ಸೆಪ್ಟೆಂಬರ್‌ನಲ್ಲಿ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಸಂಸ್ಥೆಯು ಏಡ್ಸ್ ಪದವನ್ನು ಪರಿಚಯಿಸಿತು.

ನಂತರ ಭಾರತದಲ್ಲಿ 1986ರಲ್ಲಿ ಮೊದಲ ಏಡ್ಸ್ ಪ್ರಕರಣ ಪತ್ತೆಯಾಯಿತು. ಮುಂದೆ ಈ ರೋಗವು ಸೃಷ್ಟಿಸಿದ ಅವಾಂತರ ಅಷ್ಟಿಷ್ಟಲ್ಲ. ಏಡ್ಸ್ ರೋಗಿಗಳನ್ನು ಸಮಾಜವು ಬಹಿಷ್ಕಾರದಂತಹ ಅನಿಷ್ಟ ಪದ್ಧತಿಯ ರೂಪದಲ್ಲಿಯೇ ಕಾಣುತ್ತಿತ್ತು ಎಂಬುದು ಸುಳ್ಳಲ್ಲ.

ಈ ಸಂದರ್ಭದಲ್ಲಿ ಏಡ್ಸ್ ರೋಗಿಯನ್ನು ನಮ್ಮಲ್ಲಿ ಒಬ್ಬರಂತೆ ಕಾಣಿರಿ. ಇದು ಅಂಟು ಕಾಯಿಲೆಯಲ್ಲ ಎಂದು ಮನವಿಮಾಡಿದರೂ ಸಹ ಏಡ್ಸ್ ರೋಗಿಗಳನ್ನು ಸಮಾಜವು ಕಾಣುತ್ತಿದ್ದ ರೀತಿಯೇ ಬೆರೆಯದ್ದಾಗಿತ್ತು.

ಇದನ್ನೆಲ್ಲ ಗಮನಿಸಿದ ವಿಶ್ವ ಆರೋಗ್ಯ ಸಂಸ್ಥೆ 2030ರ ಒಳಗೆ ಏಡ್ಸ್ ಮುಕ್ತವನ್ನಾಗಿಸಲು ಕರೆ ನೀಡಿತು. ಇದರ ಫಲವಾಗಿ ವಿಶ್ವ ಆರೋಗ್ಯ ಸಂಸ್ಥೆಯು 1988ರಿಂದ ಡಿ.1ನ್ನು ಪ್ರತಿವರ್ಷ ಏಡ್ಸ್ ದಿನಾಚರಣೆಯನ್ನಾಗಿ ಆಚರಿಸಿ, ಈ ರೋಗದ ಕುರಿತು ಜಾಗೃತಿ ಕಾರ್ಯಗಳನ್ನು ಆರಂಭಿಸಿದೆ.

ಅಪಾರ್ಥೇನಿಯಂ

ವಿನಾಯಕ ಕಾಮತ್

- ಕುರುಕ್ಷೇತ್ರ: ಕುರು ಆದ ಜಾಗ.
- ಶೀತ leak ರಣ: ಸಿಂಬಳ ಸುರಿಸುವುದು.
- 'enter' price: ಪ್ರವೇಶದರ.
- mudಗಾಂವ್: ಕೆಸರೂರು.
- duck ಓಟ: ಹಂಸನಡಿಗೆ, ಬಾತುಕೋಳಿ ರೇಸ್.
- ಅವಿ-ಭಜಿತ: ಅವಿಯಿಂದ ಭಜಿಸಲ್ಪಟ್ಟ.
- ಸೌಗಂಧ: vasu 100

ತಿಳಿಸಾರ

ಅಶುದ್ಧ ಹವೆ ತರುವ ಆಪತ್ತು

- ಮಾಲಿನ್ಯಪೂರಿತ ಗಾಳಿ ಜನರನ್ನು ದಡ್ಡರನ್ನಾಗಿಸುತ್ತದೆ.
- ಬಡ ರಾಷ್ಟ್ರಗಳ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ.
- ಹೊಸ ಅಧ್ಯಯನವೊಂದರ ಪ್ರಕಾರ, ದೀರ್ಘ ಕಾಲದವರೆಗೆ ನಮ್ಮ ದೇಹವನ್ನು ಕಲುಷಿತ ಗಾಳಿಗೆ ಒಡ್ಡುವುದರಿಂದ ಹಲವಾರು ದುಷ್ಪರಿಣಾಮಗಳನ್ನು, ವಿಶೇಷವಾಗಿ ಹಿರಿಯರು ಎದುರಿಸಬೇಕಾಗುತ್ತದೆ.

ಅಧ್ಯಯನದಲ್ಲೇನಿದೆ?

- ವಾಯುಮಾಲಿನ್ಯ ಹೆಚ್ಚಾದರೆ ಮೌಖಿಕ ಹಾಗೂ ಗಣಿತ ಸಾಮರ್ಥ್ಯ ಇಳಿಮುಖವಾಗುತ್ತದೆ.
- ವೃದ್ಧರು, ಅನಕ್ಷರಸ್ಥರಲ್ಲಿ ಇದು ತೀವ್ರವಾಗಿ ಕಂಡುಬಂದಿದೆ.

ಅರ್ಥ ವ್ಯವಸ್ಥೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

- ವಾಯುಮಾಲಿನ್ಯ ಜನರ ಆರೋಗ್ಯ ಕೆಡಿಸುವುದರಿಂದ ಆ ಪ್ರದೇಶದ ಆರ್ಥಿಕತೆಯ ಮೇಲೆಯೂ ದುಷ್ಪರಿಣಾಮ ಬೀರುತ್ತದೆ.
- ದಿನೇದಿನೆ ಅಧಿಕಗೊಳ್ಳುತ್ತಿರುವ ವಾಯುಮಾಲಿನ್ಯದಿಂದ ಹಿರಿಯರು ಹೊರಗಡೆ ತಿರುಗಾಡುವುದು ಕಡಿಮೆಯಾಗಿದೆ.
- ಮಹತ್ವದ ಆರ್ಥಿಕ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಕುಂಠಿತವಾಗಿದೆ.
- ಶ್ವಾಸಕೋಶ ಸಂಬಂಧಿ ಕಾಯಿಲೆಗಳು ಅವರಲ್ಲಿ ಕಂಡುಬರುತ್ತವೆ.

ಕಾಕಾ ಹೋಟ್ಲು

ಅಥಣಿ ಜನ್ರ ಗಂಡುಸ್ತನಕ್ಕೆ ಯತ್ನಾಳು ಸವಾಲ್ ಹಾಕ್ಯದಂತಲ್ಲಾ?

ಧೀರು

ಗೆಲ್ಬೇಕು ಅಂದ್ರೆ ಇವೆಲ್ಲ ಮಾಡ್ಲೇಬೇಕು ಅಲ್ವೇನ್ಲಾ ಮತ್ತೇ!

ಸುಧೀರು

ಮುಂದಿನ ಪೀಳಿಗೆಗೆ ರಾಜಕಾರಣಿಗಳ ಸಂದೇಶವಾದರೂ ಏನು?

ಅಶ್ವತ್ಥಕಟ್ಟೆ

ರಂಜಿತ್ ಎಚ್ ಅಶ್ವತ್ಥ
ranjith.hosakere@gmail.com

ಇನ್ನೆರೆಡು ದಿನದಲ್ಲಿ ಕರ್ನಾಟಕದ 15 ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಲಿದೆ. ಈ ಉಪಚುನಾವಣೆ ಬಿಜೆಪಿ-ಕಾಂಗ್ರೆಸ್ ನಡುವಿನ ಪ್ರತಿಷ್ಠೆಯ ಚುನಾವಣೆ ಎನ್ನುವುದು ಒಂದು ಭಾಗವಾದರೆ, 'ನೈತಿಕ ರಾಜಕಾರಣ' 'ಜನಪ್ರತಿನಿಧಿಯ ಐಡೆಂಟಿಟಿ'ಯ ಶಬ್ದಗಳ ಹುಡುಕಾಟವೂ ಈ ಚುನಾವಣೆಯಲ್ಲಾಗಬೇಕಿದೆ.

ರಾಜಕೀಯ ಎನ್ನುವುದು ಸಮಾಜ ಸೇವೆ ಎಂದು ಭಾವಿಸಿ ರಾಜಕೀಯ ಪ್ರವೇಶಿಸುವ ನಾಯಕರು, ತಾವು ಜನಪ್ರತಿನಿಧಿಗಳು ಎನ್ನುವ ಠೀವಿಯಲ್ಲಿ ಓಡಾಡಿಕೊಂಡಿರುತ್ತಾರೆ. ಗ್ರಾಮ ಪಂಚಾಯಿತಿಯಿಂದ ಸಂಸತ್‌ವರೆಗೆ ಜನರಿಂದ ಆಯ್ಕೆಯಾಗುವ ಎಲ್ಲ ಜನಪ್ರತಿನಿಧಿಗಳಿಗೂ, ದೇಶದಲ್ಲಿ ವಿಶೇಷ ಸ್ಥಾನಮಾನ. ಜನತಾ ನ್ಯಾಯಾಲಯದಲ್ಲಿ ಒಮ್ಮೆ ಗೆದ್ದು ಬರುವ ಜನಪ್ರತಿನಿಧಿಯನ್ನು ಆ ಕ್ಷೇತ್ರದ 'ದೊರೆ'ಯ ರೀತಿ ಕಾಣುತ್ತಾರೆ. ಶಾಸಕನಾದರಂತೂ ಇಡೀ ಜಿಲ್ಲೆ ಹಾಗೂ ಸಂಸದನಾದರೆ ಪೂರ ಜಿಲ್ಲೆ ತನ್ನ ಹಿಡಿತದಲ್ಲಿ ಎನ್ನುವ ರೀತಿಯಲ್ಲಿರುತ್ತಾರೆ. ಅದು ಒಂದು ರೀತಿ ನಿಜವೂ ಸಹ.

ಆದರೆ ಇತ್ತೀಚಿನ ದಿನದಲ್ಲಿ ನಡೆಯುತ್ತಿರುವ ರಾಜಕೀಯವನ್ನು ಗಮನಿಸಿದರೆ, ಜನಪ್ರತಿನಿಧಿ ಅಥವಾ ರಾಜಕಾರಣಿಗಳಿಗೆ ಈ ರೀತಿ ವಿಶೇಷ ಸ್ಥಾನ ನೀಡುವುದಾದರೂ ಏಕೆ? ಜನರಿಂದಲೇ ಆಯ್ಕೆಯಾಗುವ ಜನಪ್ರತಿನಿಧಿಗಳು ಮಾಡುತ್ತಿರುವ ಕೆಲಸವಾದರೂ ಏನು? ಸ್ವಹಿತಾಸಕ್ತಿ ಬಿಟ್ಟು ಏನಾದರೂ ಮಾಡಿದ್ದಾರೆಯೇ? ಪಾರದರ್ಶಕ ಆಡಳಿತಕ್ಕೆ ಅವರ ಕೊಡುಗೆ ಏನು? ಈ ಎಲ್ಲ ಅಂಶಗಳು ಹೋಗಲಿ, ಈ ಹಿಂದೆ ರಾಜಕಾರಣಿಗಳು ಉಳಿಸಿಕೊಂಡಿದ್ದ ವರ್ಚಸ್ಸನ್ನು ಇವರೂ ಉಳಿಸಿಕೊಂಡಿದ್ದಾರೆಯೇ ಎನ್ನುವ ಪ್ರಶ್ನೆಗಳು ಎದುರಾದಾಗ, ಬಹುತೇಕ ರಾಜಕಾರಣಿಗಳ ವಿಷಯದಲ್ಲಿ ಸಿಗುವುದು 'ಇಲ್ಲ' ಎನ್ನುವ ಉತ್ತರ.

ಅಂದ ಮಾತ್ರಕ್ಕೆ ಇಡೀ ರಾಜಕೀಯ ಅಥವಾ ರಾಜಕರಣಿಗಳು ಭ್ರಷ್ಟಾಚಾರಿಗಳು ಎನ್ನುವುದಲ್ಲ. ಆದರೆ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಬಹುತೇಕರನ್ನು ಈ ಮಟ್ಟಕ್ಕೆ ಇಳಿಸುತ್ತಿದೆ. ಜನಪ್ರತಿನಿಧಿಯಾಗಿ ಆಯ್ಕೆಯಾಗುವ ಮೊದಲು ಹಾಗೂ ನಂತರ ಅವರು ನಿಭಾಯಿಸಬೇಕಿರುವ ಕರ್ತವ್ಯಗಳು ಕೆಲವರನ್ನು ಅನಿವಾರ್ಯವಾಗಿ ಇಳಿಯುವಂತೆ ಮಾಡುತ್ತಿದೆ ಎನ್ನುವುದು ಮರೆಯುವಂತಿಲ್ಲ. ಬಹುತೇಕ ಪಕ್ಷದಲ್ಲಿ ಟಿಕೆಟ್ ಪಡೆಯುವ ಹೊತ್ತಿಗೆ 'ಪಾರ್ಟಿ ಫಂಡ್' ನೆಪದಲ್ಲಿ, ನಂತರ ಚುನಾವಣೆ ಸಮಯದಲ್ಲಿ ಮತದಾರರನ್ನು ಸಂತೈಸಲು ಗೆದ್ದ ಬಳಿಕ ಚುನಾವಣೆಗೆ ಕಳೆದುಕೊಂಡ ಹಣವನ್ನು ಹಿಂಪಡೆಯುವ ಧಾವಂತದಲ್ಲಿ ಅಭಿವೃದ್ಧಿಯನ್ನೇ ಮರೆಯುತ್ತಾರೆ.

ಈ ಎಲ್ಲ 'ಸಂದಾಯ' ಪ್ರಕ್ರಿಯೆ ಶುರುವಾಗುವುದು ಚುನಾವಣೆಗಳಲ್ಲಿ. ಪ್ರತಿ ಚುನಾವಣೆಗಳು ಬಂದಾಗಲೂ, ಮತದಾರರನ್ನು ಒಲೈಸಲು ಪಕ್ಷಗಳು ನಾನಾ ಪ್ರಯತ್ನಗಳನ್ನು ನಡೆಸುತ್ತಾರೆ. ಈ ಫಲಗಳಿಗೆ ಮುಕುಟದಂತೆ, ಪ್ರತಿ ವೋಟಿಗೆ ಇಂತಿಷ್ಟು 'ಸಂದಾಯ' ಎನ್ನುವ ಅಲಿಖಿತ ನಿಯಮ. ಒಂದು ಪಕ್ಷದ ಅಭ್ಯರ್ಥಿ ಹಣ ಹಂಚಿದ್ದ ಎನ್ನುವ ಕಾರಣಕ್ಕೆ ಇನ್ನೊಬ್ಬರು ಹಂಚುವುದು. ಇದೇ ರೀತಿ ಅವರು ಕೊಟ್ಟಿದ್ದಕ್ಕಿಂತ ಹೆಚ್ಚು ಇನ್ನೊಬ್ಬರು ಕೊಡುತ್ತ ಸಾಗಿ, ಇದೀಗ ಹಣ ನೀಡದೇ ಮತ ಹಾಕದ ಪರಿಸ್ಥಿತಿ ಕೆಲ ಕ್ಷೇತ್ರಗಳಲ್ಲಿ ನಿರ್ಮಾಣವಾಗಿದೆ.

ಈ ರೀತಿ ಪ್ರತಿ ವೋಟಿಗೆ ಇಂತಿಷ್ಟು ಹಣ ನೀಡಿ, ಮತಗಳನ್ನು ಖರೀದಿಸುವುದು ಒಂದೆಡೆಯಾದರೆ ಹಣದೊಂದಿಗೆ ಜಾತಿ ಬಲದ ಲೆಕ್ಕಾಚಾರದಲ್ಲಿಯೇ ಚುನಾವಣೆ ನಡೆಯುವುದು 'ಜಾತ್ಯತೀತ ರಾಷ್ಟ್ರ'ವಾಗಲು ಹೊರಟಿರುವ ಭಾರತದ ದುರಾದಷ್ಟ ಎಂದರೆ ತಪ್ಪಾಗಲಾರದು. ಜಾತ್ಯತೀತ ರಾಷ್ಟ್ರ, ಪಕ್ಷವೆಂದು ಹೇಳಿಕೊಂಡು ಓಡಾಡುವ ಎಲ್ಲ ಪಕ್ಷಗಳ ಮುಖಂಡರು ಅಂತಿಮವಾಗಿ ಟಿಕೆಟ್ ನೀಡುವಾಗ ನೋಡುವುದು ಮಾತ್ರ, 'ಯಾವ ಜಾತಿ?. ಎಷ್ಟು ಹಣವೆಂದು?'.

ಜಾತಿ, ಹಣದ ಲೆಕ್ಕಾಚಾರದಲ್ಲಿಯೇ ಚುನಾವಣೆ ಎದುರಿಸುವ ಬಹುತೇಕ ನಾಯಕರು, ಜಾತಿ ಮೀರಿದ ರಾಜಕೀಯ ನಡೆಸಬೇಕು ಎಂದು ಹೇಳುತ್ತಾರೆ. ಆದರೆ ಕೊನೆಗೆ ಜಾತಿ ಜಾಲದಲ್ಲಿ ಸಿಲುಕಿ, ಚುನಾವಣಾ ಸಮಯದಲ್ಲಿ ಕೋಟಿ ಕೋಟಿ ರುಪಾಯಿ ಖರ್ಚು ಮಾಡಿ ಗೆಲ್ಲುವಿನ ನಗೆ ಬೀರುತ್ತಾರೆ. ಆದರೆ ಈ ರೀತಿ ಹಣದ ಹೊಳೆ ಹರಿಸಿ, ಜಾತಿ ಹೆಸರಲ್ಲಿ ಮತದಾರರನ್ನು ಒಡೆದು ಗೆಲ್ಲುವ ನಾಯಕರು, ಆ ಭಾಗದ ಯುವಕರಿಗೆ ನೀಡುವ ಸಂದೇಶವಾದರೂ ಏನು? ಈ ರೀತಿ ಕೇವಲ ಜಾತಿ, ಹಣ-ಹೆಂಡದಲ್ಲಿಯೇ ಚುನಾವಣೆ ನಡೆಸುವುದಾದರೆ, ಸಿದ್ಧಾಂತ, ಅಭಿವೃದ್ಧಿ, ರಾಜಕೀಯ ನೈತಿಕತೆಯ ಬಗ್ಗೆ ಪ್ರಶ್ನೆ ಮೂಡುತ್ತವೆ. 'ಈ ರೀತಿ ಕೇವಲ ಜಾತಿ, ಹಣದ ಮೇಲೆಯೇ ಚುನಾವಣೆಗಳು ನಡೆಯುವುದಾದರೆ, ಮುಂದೆ ಯಾರು ರಾಜಕೀಯಕ್ಕೆ ಬರುತ್ತಾರೆ' ಎನ್ನುವ ಪ್ರಶ್ನೆ ಅನೇಕರಲ್ಲಿ ಎದ್ದಿರುವುದು ಸುಳ್ಳಲ್ಲ.

ಹಿಂದೆಲ್ಲ ರಾಜಕಾರಣಿಗಳೆಂದರೆ ದೊರೆ ಸಮಾನ ಎನ್ನುತ್ತಿದ್ದರು. ಶಾಸಕರೊಬ್ಬರು ತಮ್ಮ ಹಳ್ಳಿಗೆ ಬಂದರೆ ಅದ್ಧೂರಿ ಸ್ವಾಗತ ಕೋರಿ, ಜಾತ್ರೆಯ ರೀತಿ ಸಂಭ್ರಮಿಸುತ್ತಿದ್ದರು. ಈ ರೀತಿಯ ಸಂಭ್ರಮದಲ್ಲಿ ಭಾಗಿಯಾಗುತ್ತಿದ್ದ ಶಾಸಕ ತನ್ನ ಸಿದ್ಧಾಂತವನ್ನು ಉಳಿಸುವುದಕ್ಕಾಗಿ ಜೀವ ಒತ್ತೆ ಇಡಲು ಹಿಂಜರಿಯುತ್ತಿರಲಿಲ್ಲ. ಇನ್ನು ಇಂದಿನ ಚುನಾವಣೆಯಲ್ಲಿ ನಡೆಯುವ ರೀತಿ ಅಭ್ಯರ್ಥಿ ಕೋಟಿ ಕೋಟಿ ಖರ್ಚು ಮಾಡುತ್ತಿರಲಿಲ್ಲ. ಬದಲಿಗೆ ಅನೇಕ ಸಮಯದಲ್ಲಿ ಅಭ್ಯರ್ಥಿಗಳ ಖರ್ಚಿಗೆ ಜನರೇ ದೇಣಿಗೆ ಸಂಗ್ರಹಿಸಿ ಹಣ ನೀಡಿರುವ ಉದಾಹರಣೆಗಳಿವೆ. ಆದರೆ ಇಂದಿನ ದಿನಮಾನದಲ್ಲಿ ಇದು ಸಾಧ್ಯವೇ? ಅಭಿವೃದ್ಧಿ ನೋಡಿ ಮತ ಹಾಕಿ ಎನ್ನುವ ಬದಲು, ವಿವಿಧ ಆಮಿಷಗಳನ್ನು ಒಡ್ಡಿ ಮತ ಪಡೆಯುವ ಜನಪ್ರತಿನಿಧಿಯಿಂದ ಈ ರೀತಿಯ ರಾಜಕೀಯ ನಿರೀಕ್ಷೆ ಮಾಡುವುದರೂ ಹೇಗೆ? ಅವರಿಂದ ಹಣ ಅಥವಾ ಇನ್ಯಾವುದೋ 'ಗಿಫ್ಟ್'ಗಳನ್ನು ಪಡೆಯುವ ಮತದಾರ ಮುಂದಿನ ಐದು ವರ್ಷದಲ್ಲಿ ಅಭಿವೃದ್ಧಿ ವಿಚಾರದ ಬಗ್ಗೆ ಆತನನ್ನು ಪ್ರಶ್ನಿಸುವುದಾದರೂ ಹೇಗೆ ಸಾಧ್ಯ?

ಇನ್ನು ಹಣ, ಜಾತಿ ಬಲದೊಂದಿಗೆ ಗೆಲ್ಲುವುದು ಒಂದಾದರೇ, ಈ ಬಾರಿಯ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿರುವ 13 ಶಾಸಕರ ವಿಚಾರದಲ್ಲಿ ಕೇಳಿಬರುತ್ತಿರುವ ಬಹುದೊಡ್ಡ ಪ್ರಶ್ನೆ ಎಂದರೆ ಅವರ ಸೈದ್ಧಾಂತಿಕ ನಿಲುವು. ಶಿವರಾಂ ಹೆಬ್ಬಾರ್, ಆನಂದ್ ಸಿಂಗ್ ಹೊರತುಪಡಿಸಿ ಇನ್ನುಳಿದ ಬಹುತೇಕ ನಾಯಕರು ಬಿಜೆಪಿ ವಿರುದ್ಧ ಕೆಂಡಕಾರುತ್ತಿದ್ದವರೇ. ಕೇವಲ ವರ್ಷದ ಹಿಂದಿನ ಚುನಾವಣೆಯಲ್ಲಿ 'ಬಿಜೆಪಿಯಿಂದ ದೇಶ ಬಿಕರಿಯಾಯಿತು' ಎಂದು ಬೊಬ್ಬೆ ಹೊಡೆಯುತ್ತಿದ್ದರು. ಆದರೆ ಕರ್ನಾಟಕದಲ್ಲಿದ್ದ ಕಾಂಗ್ರೆಸ್-ಜೆಡಿಎಸ್ ಸರಕಾರ ಬೀಳಿಸುವುದಕ್ಕೋ ಅಥವಾ ಸರಕಾರದಲ್ಲಿ ತಮ್ಮ ಕ್ಷೇತ್ರದಲ್ಲಿ ಅನುದಾನ ಸಿಗುತ್ತಿಲ್ಲ ಎನ್ನುವ ಕಾರಣಕ್ಕೂ ರಾಜೀನಾಮೆ ನೀಡಿ ಬಿಜೆಪಿಯಿಂದ ಸ್ಪರ್ಧಿಸುತ್ತಿದ್ದಂತೆ, ಈ ಎಲ್ಲರ ಮಾತುಗಳೇ ಬದಲಾಗಿದೆ. ಚುನಾವಣೆಯಲ್ಲಿ ಬಿಜೆಪಿಯ ಹುರಿಯಾಳುಗಳಾಗಿ ಅಖಾಡಕ್ಕೆ ಇಳಿಯುತ್ತಿದ್ದಂತೆ, ಕಮಲವೆಂದರೆ ಕೆಂಡಕಾರುತ್ತಿದ್ದರು, ಈಗ ಬಿಜೆಪಿಯನ್ನು 'ಸ್ವರ್ಗ'ಕ್ಕೆ ಹೋಲಿಸುತ್ತಿದ್ದಾರೆ.

ಇನ್ನು ಕೇವಲ ಕಾಂಗ್ರೆಸ್-ಜೆಡಿಎಸ್‌ನಿಂದ ಬಂದವರಲ್ಲ, ಅವರನ್ನು ಸೇರಿಸಿಕೊಂಡ ಬಿಜೆಪಿ ನಾಯಕರೂ ಈ ಎಲ್ಲ ನಾಯಕರ ವಿರುದ್ಧ ಒಂದಲ್ಲ ಒಂದು ಸಮಯದಲ್ಲಿ ಟೀಕಾ ಪ್ರಹಾರ ನಡೆಸಿದವರೇ. ಆದರೆ ಇದೀಗ ಕಮಲ ಚಿಹ್ನೆಯಡಿ ಸ್ಪರ್ಧಿಸುತ್ತಿದ್ದಂತೆ, ಈ ಎಲ್ಲ ಅಭ್ಯರ್ಥಿಗಳನ್ನು ಸತ್ಯ ಹರಿಶ್ಚಂದ್ರನಿಗೆ ಹೋಲಿಸುವುದು ಒಂದೇ ಬಾಕಿ. ಪಕ್ಷಕ್ಕೆ ಬಂದಿರುವ 16 ಜನರ ಮೇಲೆ ಕಳೆದ ಚುನಾವಣೆಯಲ್ಲಿ 'ಗೂಬೆ' ಕೂರಿಸಿದ್ದ ನಾಯಕರೇ ಇಂದು ಈ ಎಲ್ಲರು ಸಚ್ಚಾರಿತ್ರ್ಯ ಹೊಂದಿರುವ ನಾಯಕರು ಎನ್ನುವ ರೀತಿಯಲ್ಲಿ ಮಾರುದ್ದ ಭಾಷಣ ಮಾಡುತ್ತಿದ್ದಾರೆ. ಇದು ಕೇವಲ ಬಿಜೆಪಿಗೆ ಸೀಮಿತವಾಗಿಲ್ಲ. ಬಿಜೆಪಿಯಿಂದ ಕಾಂಗ್ರೆಸ್‌ಗೆ ಹೋದ ನಾಯಕರನ್ನು ಅಲ್ಲಿರುವ ನಾಯಕರು, 'ಹಿರೋ'ಗಳ ರೀತಿ ಬಿಂಭಿಸುವ ಪ್ರಯತ್ನವನ್ನು ಮಾಡುತ್ತಿರುವುದು ಹೊಸದೇನಲ್ಲ.

ರಾಜಕೀಯ ಎಂದ ಮೇಲೆ ಈ ರೀತಿಯ ಬದಲಾವಣೆ ಸಹಜ. ಆದರೆ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹೋಗುತ್ತಿದ್ದಂತೆ, ಹಿಂದಿನ ಪಕ್ಷದ ನಾಯಕರ ಬಗ್ಗೆ ವಾಗ್ದಾಳಿ ನಡೆಸುವುದು. ಅವರೆಲ್ಲ ರಾಜಕೀಯದಲ್ಲಿ ಇರುವುದೇ ತಪ್ಪು ಎನ್ನುವ ರೀತಿ ಮಾತನಾಡುವ ನಾಯಕರ ಮಾತುಗಳನ್ನು ಜನರಾದರೂ ಹೇಗೆ ನಂಬಬೇಕು? ಈ ರಾಜಕೀಯ ಬದಲಾವಣೆಗಳಿಗೆ ಸಾಕ್ಷಿಯಾಗುವ ಇಂದಿನ ಯುವ ಪೀಳಿಗೆ ಇದನ್ನು 'ರಾಜಕೀಯ ನೈತಿಕತೆಯ ಪತನ'ದ ರೀತಿ ನೋಡುವುದರಲ್ಲಿ ತಪ್ಪಿಲ್ಲ. ರಾಜಕಾರಣಿಗಳು ಬಟ್ಟೆ ಬದಲಿಸಿದ ರೀತಿ, ತಮ್ಮ ಪಕ್ಷ, ಸಿದ್ಧಾಂತಗಳನ್ನು ಬದಲಿಸಿದರೆ ಅವರ ಹಿಂದೆ ವರ್ಷಗಟ್ಟಲೆ ದುಡಿದಿರುವ, ನಾಯಕನ ಉಳಿವಿಗಾಗಿ ವಿರೋಧ ಪಕ್ಷದೊಂದಿಗೆ ಹೋರಾಡಿದ್ದ ಸಾಮಾನ್ಯ ಕಾರ್ಯಕರ್ತರು ಏನು ಮಾಡಬೇಕು? ಎನ್ನುವ ಪ್ರಶ್ನೆಗಳಿಗೆ ಯಾವ ಪಕ್ಷಾಂತರಿಗಳಿಂದಲೂ ಬಹುಷಃ ಉತ್ತರ ಸಿಗಲಿಕ್ಕಿಲ್ಲ.



ನಾಯಕರು ತಮಗಿಷ್ಟ ಬಂದಾಗ ತಮಗಿಷ್ಟ ಬಂದ ಪಕ್ಷಕ್ಕೆ ಹೋಗುವುದು, ಅಲ್ಲಿಂದ ಚುನಾವಣೆ ಸ್ಪರ್ಧಿಸಿ ಗೆಲ್ಲುವುದಕ್ಕೆ 'ಅಗತ್ಯ' ಸಿದ್ಧತೆಗಳನ್ನು ಸದಾ ಮಾಡಿಕೊಂಡಿರುತ್ತಾರೆ. ಹಣ, ಜಾತಿ ಲೆಕ್ಕಾಚಾರದಲ್ಲಿ ಯಾರನ್ನು ಬೇಕಾದರೂ ಸೋಲಿಸಬಹುದು ಎನ್ನುವ ಅಹಂನಲ್ಲಿಯೇ ಅನೇಕರು ಇತ್ತೀಚಿಗೆ ರಾಜಕೀಯ ಮಾಡುತ್ತಿದ್ದಾರೆ. ಇಂತಹ ನಾಯಕರಿಂದ ರಾಜಕೀಯ, ರಾಜಕಾರಣಿಗಳಿಗಿ